## ಪ್ರೆಸ್ಸಿಂಗ್ ಮೂಗುತಿ

ಪ್ರೆಸ್ಸಿಂಗ್ ಮೂಗುತಿ ಹಾಕಬೇಕಾದರೆ ಮೂಗು ಚುಚ್ಚಿಸಿಕೊಳ್ಳಬೇಕೆಂದಿಲ್ಲ. ಸುಲಭವಾಗಿ ಧರಿಸಿ ತೆಗೆದು ಇಡಬಹುದು. ಶೀತ ಪ್ರಕೃತಿ ಇರುವವರಿಗೆ ಇದು ತುಂಬ ಪ್ರಯೋಜನಕಾರಿ. ರಾತ್ರಿ ಮಲಗುವಾಗ ತುಂಬ ಜನರಿಗೆ ಮೂಗುತಿ ಇದ್ದರೆ ಇಷ್ಟ ಆಗೋಲ್ಲ. ಅಂತಹ ಮಹಿಳೆಯರಿಗೂ ಇದು ಹಿತಕಾರಿ. ಜೊತೆಗೆ ದೊಡ್ಡ ದೊಡ್ಡ ಮೂಗುತಿ ಧರಿಸಬಹುದು.

ಆ್ಯಂಟಿಕ್, ಆಕ್ಸಿಡೈಸ್ಡ್ ವಿನ್ಯಾಸ, ಮುತ್ತಿನ, ಹರಳಿನ, ಎನಾಮಲ್, ಹಳದಿ ಚಿನ್ನದ ಮೂಗುತಿ... ಹೀಗೆ ಯಾವುದೇ ರೀತಿಯ ಆಭರಣವನ್ನೂ ತಯಾರು ಮಾಡಬಹುದು. ಜೊತೆಗೆ ಬೆಳ್ಳಿಯ ಮೂಗುತಿಗಳೂ ಈಗ ಮಾರುಕಟ್ಟೆಯಲ್ಲಿ ಸಿಗುತ್ತವೆ. ಬಹಳ ಸ್ಟೈಲಿಶ್ ಆಗಿ ಕಾಣುತ್ತವೆ.

## ಉತ್ತರ ಕರ್ನಾಟಕ ಶೈಲಿ ಮೂಗುತಿಗಳು

ಮುತ್ತಿಗೆ ಪ್ರಾಧಾನ್ಯ ಇರುವ ಮೂಗುತಿಗಳೇ ಇಲ್ಲಿ ಪ್ರಸಿದ್ಧವಾಗಿದೆ. ಮುತ್ತಿನ ಜೊತೆಗೆ ಕೆಂಪು ಹರಳು ಇದ್ದು ತಂತಿ ಅಥವಾ ಸರಿಗೆಯಲ್ಲಿ ಪೋಣಿಸಲಾಗುತ್ತದೆ. ಇದು ಸ್ವಲ್ಪ ದೊಡ್ಡದಾಗಿ ಇರುತ್ತದೆ. ಇಳಕಲ್ ಸೀರೆ ಉಡುವಾಗ ಈ ತರಹದ ಮೂಗುತಿ ಬಹಳ ಸೊಗಸಾಗಿ ಕಾಣುತ್ತದೆ. ಇದು ತುಂಬಾ ಭಾರ ಇರುವುದಿಲ್ಲ. ತುರುಬು ಕಟ್ಟಿ ಈ ಮೂಗುತಿ ಧರಿಸಿದರೆ ಸಖತ್ ಲುಕ್ ಕೊಡುತ್ತದೆ.

## ಸಾಂಪ್ರದಾಯಿಕ ಹಿನ್ನೆಲೆ

ಮೂಗಿನ ಎರಡು ಮೇಲ್ಮೈ ಮೇಲೆ ಚಿನ್ನ ಅಥವಾ ರತ್ನಗಳನ್ನು ಇಟ್ಟುಕೊಳ್ಳುವುದು ಭಾರತೀಯ ಸಂಪ್ರದಾಯ. ಕರ್ನಾಟಕ ಅಲ್ಲದೆ ಪಂಜಾಬ್, ರಾಜಸ್ಥಾನ, ನೇಪಾಳಿಗಳಲ್ಲಿ ಮೂಗುತಿ ಧರಿಸುವುದು ಸಾಮಾನ್ಯ. ಇದನ್ನು 'ನಥೋರಿ' ಎಂದು ಕರೆಯಲಾಗುತ್ತದೆ.

ಮೂಗುತಿಗೆ ಪುರಾಣಗಳಲ್ಲೂ ಬಹಳ ಮಹತ್ವವಿದೆ. ಸುಮಾರು ಐದು ಸಾವಿರ ವರ್ಷಗಳಷ್ಟು ಹಿಂದೆ ನಥೋರಿಯನ್ನು ಪಾರ್ವತಿ ಮತ್ತು ಕೃಷ್ಣನ ಮೂಲಕ ಚಿತ್ರಿಸಲಾಗಿತ್ತು. ಮಹಾರಾಷ್ಟ್ರ, ಬಂಗಾಳಗಳಲ್ಲಿ ಮಹಿಳೆಯರು ವಿಭಿನ್ನವಾಗಿ ಮೂಗುತಿ ತೊಡುತ್ತಾರೆ.

ಮೂಗಿನ ಆಭರಣಗಳು ಒಂಬತ್ತನೇ ಶತಮಾನಗಳಲ್ಲೇ ಜನಪ್ರಿಯವಾಗಿದ್ದವು. ಇದು ಆರ್ಥಿಕ ಸ್ಥಾನಮಾನದ ಪ್ರದರ್ಶನವೂ ಆಗಿತ್ತು. ರಾಣಿಯರು, ಶ್ರೀಮಂತ ವರ್ಗದ ಮಹಿಳೆಯರು ನೀಲಮಣಿ, ಕುಂದನ್‌ಗಳ ನತ್ತು ಧರಿಸುತ್ತಿದ್ದರು. ನಂತರ ಬೆಳ್ಳಿಯ ಮೂಗುತಿ ಬೆಳಕಿಗೆ ಬಂತು. ಅದಾಗಿ ಚಿನ್ನ, ವಜ್ರದ ಹರಳುಗಳಿಂದ ಮಾಡಿದ ಮೂಗುತಿ ಚಾಲ್ತಿಗೆ ಬಂದು ಈಗಲೂ ಪ್ರಚಲಿತದಲ್ಲಿದೆ. ಅಲ್ಲದೆ ಈ ಮೂಗುತಿ ಇದೀಗ ಫ್ಯಾಷನ್‌ನ ಹಾದಿಯನ್ನು ಹಿಡಿದಿದೆ.



## ಬಳೆಯಾಕಾರದ ಮೂಗುತಿ

ಇದು ಸಾಧಾರಣ ಪ್ರೆಸ್ಸಿಂಗ್‌ನಲ್ಲೂ ಇರುತ್ತದೆ. ತೂತು ಮಾಡಿಯೂ ಧರಿಸುತ್ತಾರೆ. ಬಳೆಯಿಂದ ಸರ ಹೊರ ಹೊಮ್ಮಿ ಕೂದಲಿನಲ್ಲಿ ಹುಕ್ ಹಾಕುವಂತಹ ಮೂಗುತಿ. ಮದುಮಗಳಿಗೆ ಬಳಸುತ್ತಾರೆ. ಈ ಮೂಗುತಿ ಉತ್ತರ ಭಾರತದಲ್ಲಿ ಬಹಳ ಪ್ರಸಿದ್ಧವಾಗಿದೆ. ಇದರಲ್ಲಿ ಡೈವರ್ಕ್, ಬೀಡ್ಸ್ ಅನ್ನು ಸರಿಗೆಯಲ್ಲಿ ಪೋಣಿಸಿ ವಿನ್ಯಾಸ ಮಾಡಿದ್ದು, ಪಿಯರ್ ಶೇಪ್‌ನ ಹರಳುಗಳನ್ನು ಸೆಟ್ಟಿಂಗ್ ಮಾಡಲಾಗುತ್ತದೆ. ಜೊತೆಗೆ ಎರಡು ಎಳೆಯಲ್ಲಿ ಒಂದು ಎಳೆ ಮುತ್ತನ್ನು ಪೋಣಿಸಿ ಇನ್ನೊಂದು ಚಿನ್ನದ ಸರ ಇದ್ದು ಮುತ್ತುಗಳನ್ನು ಸರದಲ್ಲಿ ಅಳವಡಿಸಿ ಕಿವಿಯ ಮೇಲ್ಭಾಗದಲ್ಲಿರುವ ತಲೆ ಕೂದಲಿನಲ್ಲಿ ಸಿಕ್ಕಿಸಬಹುದು. ಅವರವರ ಇಷ್ಟಕ್ಕೆ ಹೊಂದಿಕೊಂಡು ಧರಿಸಬಹುದು.

## ಎರಡೆಳೆ ಮೂರೆಳೆ ಮೂಗುತಿ

ಇದು ಕೂಡ ಮೂಗಿನಿಂದ ಎರಡು ಎಳೆ ಮೂರೆಳೆ ಚಿನ್ನದ ಸರ ಹೊರಹೊಮ್ಮಿ ಕಿವಿಯ ಮೇಲ್ಭಾಗದಲ್ಲಿರುವ ತಲೆ ಕೂದಲಿನಲ್ಲಿ ಸಿಲುಕಿಸುವಂತಹದ್ದು. ಇದನ್ನು ಮೂಗು ಬೊಟ್ಟಿನಿಂದಲೂ, ಸಣ್ಣ ರಿಂಗ್ ಬಳಸಿಯೂ ಧರಿಸಬಹುದು. ಮದುಮಗಳಿಗೆ ಬಹಳ ಸುಂದರವಾಗಿ ಕಾಣುತ್ತದೆ. ಲೆಹೆಂಗಾ, ಸೀರೆ ತೊಟ್ಟಾಗಲೂ ಚೆನ್ನಾಗಿ ಕಾಣಿಸುತ್ತದೆ.

## ಜಾಲರಿ ಮೂಗುತಿ

ಇದು ಇತ್ತೀಚೆಗೆ ಬಹಳ ಜನಪ್ರಿಯವಾಗುತ್ತಿದೆ. ಜಾಲರಿಗಳು ಕಿವಿಯೋಲೆಯಲ್ಲಿ ಜೋತಾಡಿಕೊಂಡು ಸುಂದರವಾಗಿರುತ್ತದೆ. ಅದೇ ರೀತಿ ಮೂಗುತಿಯಲ್ಲಿ ಕೆಳಭಾಗಕ್ಕೆ ಗೊಂಚಲಾಗಿ, ಉದ್ದ ಎಳೆಯಾಗಿ ಬಹಳ ಸುಂದರವಾಗಿ ಕಾಣುತ್ತದೆ. ಪುಟ್ಟದಾದ ಜಾಲರಿ ಪುಟ್ಟ ಮಕ್ಕಳಿಗೆ ನೃತ್ಯದಲ್ಲಿ, ಜಾನಪದ ಶೈಲಿಯ ನಾಟಕದಲ್ಲಿ ಹಾಡು ಹೇಳುವಾಗ ಹಾಕಿಕೊಂಡಲ್ಲಿ ಮುದ್ದಾಗಿ ಕಾಣುತ್ತಾರೆ.

ಮೂಗುತಿಯನ್ನು ಹಲವು ರೀತಿಯಲ್ಲಿ ತೊಡುತ್ತಾರೆ. ಮೂಗಿನ ಎರಡು ಬದಿಗೂ, ಮೂಗಿನ ಕೆಳಗಿನ ಭಾಗಕ್ಕೆ, ಮೂಗಿನಿಂದ ಹೊರಟು ಅದರ ಸರ ಕೂದಲಿನವರೆಗೆ, ಫ್ಯಾಷನ್‌ಗಾಗಿ ಮೂಗಿನ ತುದಿಗೆ ಚುಚ್ಚಿಸಿ ಸಣ್ಣ ಮೂಗುತಿ ಬೊಟ್ಟು, ರಿಂಗ್ ಧರಿಸುತ್ತಾರೆ.

ಸ್ತ್ರೀಗೆ ಆಭರಣ ಚಂದ, ಅದರಲ್ಲಿ ಮೂಗುತಿ ಅಂದ. ಏಕೆಂದರೆ ನಾವು ಒಬ್ಬರ ಮುಖ ನೋಡಿ ನಗುವಾಗ ಮೊದಲು ಕಾಣುವುದು ಆಭರಣಗಳಲ್ಲಿ ಶ್ರೇಷ್ಠವಾದ ಮೂಗುತಿಯೇ. ಜೊತೆಗೆ ವೈಜ್ಞಾನಿಕ ದೃಷ್ಟಿಕೋನದಿಂದಲೂ ಮೂಗುತಿ ಬಹಳ ಪ್ರಾಮುಖ್ಯವಾದ ಆಭರಣ ಎಂದರೆ ತಪ್ಪಿಲ್ಲ.